ದಿನಾಂಕ:22/03/2018 ರಂದು ಗುರುವಾರ ಬೆಳಿಗ್ಗೆ 11:00 ಗಂಟೆಗೆ ನಾಗಮಂಗಲ ತಾಲ್ಲೂಕಿನ ನಾಗಮಂಗಲ ಉಪ ವಿಭಾಗ ಕಛೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

**ಹಾಜರಿದ್ದ ಅಧಿಕಾರಿಗಳು / ನೌಕರರು.**

ಶ್ರೀ/ಶ್ರೀಮತಿ/ಕುಮಾರಿ:

| | | |
|---|---|---|
| 1) | ಪ್ರಕಾಶ | : ಉಪಲೆಕ್ಕಾಧಿಕಾರಿಗಳು, ಮಂಡ್ಯ ವೃತ್ತ. |
| 2) | ನಾರಾಯಣ ಕಳ್ಳಿಮನಿ | : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ವಿಭಾಗ |
| 3) | ಜಿ. ರಾಮಚಂದ್ರ | : ಲೆಕ್ಕಾಧಿಕಾರಿ, ನಾಗಮಂಗಲ ವಿಭಾಗ |
| 4) | ಮಹಾದೇವಪ್ಪ | : ಲೆಕ್ಕಾಧಿಕಾರಿ (ಆಂ.ಪ),ಪಾಂಡವಪುರ ವಿಭಾಗ |
| 5) | ಜಗದೀಶ್ | : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ಉಪವಿಭಾಗ |
| 6) | ಡಿ.ನಟರಾಜ | : ಪ್ರಭಾರ ಸಹಾಯಕ ಇಂಜಿನಿಯರ್(ತಾಂ), ನಾಗಮಂಗಲ ವಿಭಾಗ |
| 7) | ಎನ್.ಜಿ.ಹರೀಶ್ | : ಸಹಾಯಕ ಇಂಜಿನಿಯರ್(ತಾಂ), ನಾಗಮಂಗಲ ಉಪವಿಭಾಗ |
| 8) | ಬೀರಪ್ಪ | : ಕಿರಿಯ ಇಂಜಿನಿಯರ್(ವಿ), ದೇವಲಾಪುರ ಶಾಖೆ |
| 9) | ಅಶೋಕ ಎ.ಟಿ | : ಪ್ರಭಾರ ಕಿರಿಯ ಇಂಜಿನಿಯರ್(ವಿ), ಚೀಣ್ಯ ಶಾಖೆ |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಾಗ ನಾಗಮಂಗಲ ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸಿ ಬಗೆಹರಿಸುವ ನಿಟ್ಟಿನಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಜನ ಸಂಪರ್ಕ ಸಭೆಯನ್ನು ನಡೆಸುವಂತೆ ಕೆ.ಇ.ಆರ್.ಸಿ ರವರಿಂದ ಆದೇಶವಾಗಿರುತ್ತದೆ. ವಿದ್ಯುತ್ ದರವನ್ನು ಪರಿಷ್ಕರಿಸುವ ಸಂದರ್ಭದಲ್ಲಿ ವಿದ್ಯುತ್ ಬಳಕೆದಾರರ ಒಪ್ಪಿಗೆಯ ಅವಶ್ಯಕತೆ ಇರುತ್ತದೆ. ಶಾಖಾಧಿಕಾರಿಗಳು ವಿದ್ಯುತ್ ಬಳಕೆದಾರರ ಸಮಸ್ಯೆಗಳಿಗೆ ಸ್ಪಂದಿಸುವ ಕುರಿತು ಹಾಗೂ ಗ್ರಾಹಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಉಪಲೇಕ್ಕಾಧಿಕಾರಿಗಳು, ಸೆಸ್ಕ್ ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ ರವರು ವಿದ್ಯುತ್ ಸಂಬಂಧಿತ ದೂರುಗಳನ್ನು ಮೌಖಿಕವಾಗಿ / ಲಿಖಿತವಾಗಿ ಸಲ್ಲಿಸುವಂತೆ ವಿದ್ಯುತ್ ಗ್ರಾಹಕರಲ್ಲಿ / ಸಾರ್ವಜನಿಕರಲ್ಲಿ ಕೇಳಲಾಯಿತು.

ಈ ಹಿಂದಿನ ಸಭೆಗಳಲ್ಲಿ ಚರ್ಚಿಸಲಾದ/ ನೀಡಲಾದ ದೂರು ಅಥವಾ ಸಮಸ್ಯೆಗಳ ಬಗ್ಗೆ ಹಾಗೂ ಅವುಗಳನ್ನು ಬಗೆಹರಿಸಲು ಕೈಗೊಂಡ ಕ್ರಮದ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ರವರೊಂದಿಗೆ ಚರ್ಚಿಸಿ ಪರಿಶೀಲಿಸಿದರು.

1) ಮುದ್ದರಾಮಯ್ಯ,ಸಂಪನಹಳ್ಳಿ ಮೊಬೈಲ್ ನಂ -9886368861

ದೂರು:- ಸ್ಥಾವರದ ಸಂಖ್ಯೆ ಎನ್.ಡಿ.ಎ-1.2 ಆಗಿದ್ದು ನಮ್ಮ ಮನೆ ಊರಿನಿಂದ ಒರಗಡೆ ಇರುವುದರಿಂದ ಕುಡಿಯುವ ನೀರುಗಾಗಿ 3ಪೇಸ್ ಸಂಪರ್ಕ ಕಲ್ಪಿಸಲು ಕೋರಿರುತ್ತಾರೆ.

ಕ್ರಮ:- ಕಾರ್ಯನಿರ್ವಾಹಕ ಇಂಜಿನಿಯರ್(ವಿ) ನಾಗಮಂಗಲರವರು ಸದರಿ ಸ್ಥಾವರಕ್ಕೆ 1ಪೇಸ್ ವಿದ್ಯುತ್ ಸಂಪರ್ಕ ಈಗಾಗಲೇ ನೀಡಿದ್ದು ಸದರಿ ಸಂಪರ್ಕದಲ್ಲಿ 1ಪೇಸ್ ಮೋಟರ್ ಉಪಯೋಗಿಸಬಹುದು ಎಂದು ತಿಳಿಸಿದರು.

2) ಹೆಚ್.ಎನ್.ಗೋಪಾಲಕೃಷ್ಣ ಹರಳಕೆರೆ ಮೊಬೈಲ್ ನಂ:-8277096765

ದೂರು:- ಅಕ್ರಮ ಸಕ್ರಮ ಯೋಜನೆಯಲ್ಲಿ work order ಆಗಿದ್ದು ಇಲ್ಲಿಯವರೆಗು ಕಾಮಗಾರಿ ಕೈಗೊಂಡಿರವುದಿಲ್ಲ ಕೋರಿದರು.

ಕ್ರಮ:- ಈಗಾಗಲೇ ಅವಾರ್ಡ್ ಆಗಿದ್ದು ಶ್ರೀ ನಂಜುಂಡೇಶ್ವರಿ ಎಲೆಕ್ಟ್ರೀಕಲ್ಸ್‌ರವರಗೆ ಶೀಘ್ರವಾಗಿ ಕಾಮಗಾರಿ ಮುಗಿಸಲು ಸೂಚಿಸಿದರು.

3) ತಮ್ಮಣ್ಣ ಗೌಡ,ಬ್ಯಾಡರಹಳ್ಳಿ ಮೊಬೈಲ್ ನಂ:- 971791212

ದೂರು:- ಎಫ್-1 ಕೋಟೆಬೆಟ್ಟ ಫೀಡರ್ ನಂ 3ಪೇಸ್ ಸಂಪರ್ಕ ಯಾವ ಸಮಯದಲ್ಲಿ ನೀಡುತ್ತಿರಿ ಎಂದು ಕೇಳಿದರು.

ಕ್ರಮ:- ಸಹಾಯಕ ಇಂಜಿನಿಯರ್(ವಿ) ನಾಗಮಂಗಲರವರು 3 ಪೇಸ್ ನೀಡುವ ಸಮಯದ ಸಂಪೂರ್ಣ ಮಾಹಿತಿಯನ್ನು ನೀಡಲಾಯಿತು.

4) ಯೋಗನರಸಿಂಹ ಕನಗೋನಹಳ್ಳಿ ಮೊಬೈಲ್ ನಂ:- 8971239179

ದೂರು:-ಪರಿವರ್ತಕ ಅಳವಡಿಸಲು ಕಂಬಗಳನ್ನು ನೆಟ್ಟಿದ್ದು,ಇದುವರೆಗೂ ವೈರ್ ಮತ್ತು ಟಿ.ಸಿ.ಅಳವಡಿಸಿರವುದಿಲ್ಲ ಎಂದು ಮನವಿ ಸಲ್ಲಿಸಿದರು.

ಕ್ರಮ:- ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ 1 ವಾರದೊಳಗೆ ವರದಿ ನೀಡುವಂತೆ ಸೂಚಿಸಿದರು.

5) ತಮ್ಮಣ್ಣಗೌಡ ನಾಗಮಂಗಲ ಮೊಬೈಲ್ ನಂ:- 141734225

ದೂರು:- ಬಿ.ಎನ್.ಪಿ-23 ಶಾಶ್ವತ ನಿಲುಗಡೆಗೊಂಡಿದ್ದು ಸದರಿ ಸ್ಥಾವರದ ಠೇವಣಿ ಹಣವನ್ನು ಹಿಂದಿರುಗಿಸುವಂತೆ ಕೋರಿದರು.

ಕ್ರಮ:- ಲೆಕ್ಕಾಧಿಕಾರಿಯವರು ಮಾತನಾಡಿ ಸದರಿ ಸ್ಥಾವರದ ಮಾಲೀಕರು ಇಲ್ಲದ ಕಾರಣ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿ ಕೊಡುವಂತೆ ಮತ್ತು ಆಂತರಿಕ ಪರಿಶೋದಕರ approvel ಸಿಕ್ಕ ತಕ್ಷಣ ಹಿಂದಿರುಗಿಸಲಾಗವುದು ಎಂದು ಹೇಳಿದರು.

6) <u>ವೆಂಕಟೇಶ ನಲ್ಕುಂದಿ ಮೊಬೈಲ್ ನಂ:-8184063 16</u>

ದೂರು:- ಇ & ಐ ಯೋಜನೆಯಡಿಯಲ್ಲಿ ಪರಿವರ್ತಕ ಅಳವಡಿಸಲು ದಿನಾಂಕ:29.09.2016 ರಂದು ಕಂಬಗಳನ್ನು ಅಳವಡಿಸಿದ್ದು ಇಲ್ಲಿಯವರೆಗೂ ಟಿ.ಸಿಯನ್ನು ಹಾಕಿರುದಿಲ್ಲ ಎಂದು ಕೋರಿದರು.

ಕ್ರಮ:- ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಿದರು.

ದೂರು:- ನಲ್ಕುಂದಿ ಗ್ರಾಮದ ಐ.ಪಿ ಟಿ.ಸಿ.ಲೈನುಗಳಲ್ಲಿ ಮರ ಗಿಡಗಳಿದ್ದು ಕತ್ತರಿಸಲು ಹಾಗೂ ಟಿ.ಸಿ ಯನ್ನು ಪರಿಶೀಲಿಸುವಂತೆ ಮಾರ್ಗದಾಳುಗಳಿಗೆ ಸೂಚನೆ ನೀಡಬೇಕೆಂದು ಕೋರಿದರು.

ಕ್ರಮ:- ಕಾರ್ಯನಿರ್ವಾಹಕ ಇಂಜಿನಿಯರ್ ಮಾತನಾಡಿ ಶಾಖಾಧಿಕಾರಿಗಳಿಗೆ ಎಲ್.ಟಿ /ಹೆಚ್.ಟಿ ಮಾರ್ಗಗಳಿಗೆ ತಗಲುವ ಮರಗಿಡಗಳನ್ನು ಕತ್ತರಿಸಲು ಲೈನುಗಳನ್ನು ಸುಸ್ಥಿತಿಯಲ್ಲಿ ಇಡಲು ಸೂಚಿಸಿದರು.

ದೂರು:- ಎನ್.ಡಿ.ಪಿ-1 ರ ಸ್ಥಾವರವು 5 ತಿಂಗಳಿನಿಂದ ನಿಲ್ಲಿಸಿದ್ದು ಸದರಿ ಸ್ಥಾವರದ ಬಾಕಿ ಮೊತ್ತವನ್ನು ತಿಳಿಸಬೇಕೆಂದು ಮತ್ತು Re-connection ನೀಡಬೇಕೆಂದು ಕೋರಿದರು.

ಕ್ರಮ:- ಲೆಕ್ಕಾಧಿಕಾರಿಗಳು ಮಾತನಾಡಿ ಬಾಕಿ ಹಣದ ಮಾಹಿತಿಯನ್ನು ನೀಡಲಾಯಿತು ಹಾಗೂ ಬಾಕಿ ಮೊತ್ತವನ್ನು ಪಾವತಿಸಿದ ತಕ್ಷಣ Re-connection ನೀಡಲಾಗುವುದು ಎಂದು ಹೇಳಿದರು.

7) <u>ಕೃಷ್ಣಪ್ಪ ಗುರುಗಳಮಾದಹಳ್ಳಿ ಮೊಬೈಲ್ ನಂ:-94 9627123</u>

ದೂರು:- ತೋಟದಲ್ಲಿ ಮನೆ ಕಟ್ಟಿದ್ದು ಡಿ.ಡಿ.ಯು.ಜಿ.ವೈ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ನೀಡಬೇಕೆಂದು ಕೋರಿದರು.

ಕ್ರಮ:- ಸದರಿ ಗ್ರಾಮದ ವ್ಯಾಪ್ತಿಯಲ್ಲಿ ಡಿ.ಡಿ.ಯು.ಜಿ.ವೈ ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದ್ದು ಸ್ಥಳ ಪರಿಶೀಲನೆ ನಡೆಸಿ ನಿಯಮಾನುಸಾರ ಕ್ರಮ ವಹಿಸುವಂತೆ ಸೂಚಿಸಿದರು.

8) <u>ಜವರೇಗೌಡ ಗುರುಗಳಮಾದಹಳ್ಳಿ ಮೊಬೈಲ್ ನಂ:-9482848589</u>

ದೂರು:- ನಮ್ಮ ಜಮೀನಿನಲ್ಲಿ ಲೈನುಗಳು ಕೆಳಮಟ್ಟದಲ್ಲಿ ಇದ್ದು ಮದ್ಯವರ್ತಿ ಕಂಬ ಅಳವಡಿಸಲು ಕೋರಿದರು.

ಕ್ರಮ:- ಸ್ಥಳ ಪರಿಶೀಲಿಸಿ ಲೈನುಗಳನ್ನು ಎಳೆಸುವುದು ಹಾಗೂ ಆಗತ್ಯ ಇದ್ದರೆ ಮದ್ಯವರ್ತಿ ಕಂಬಗಳನ್ನು ಅಳವಡಿಸಲು ಶಾಖಾಧಿಕಾರಿಗಳಿಗೆ ಸೂಚಿಸಿದರು.

9) <u>ಪುಟ್ಟಸ್ವಾಮಿ ಕಲ್ಲಿನಾಥಪುರ ಮೊಬೈಲ್ ನಂ:-99 0714515</u>

ದೂರು:- 100ಕೆವಿಎ ಪರಿವರ್ತಕ ಸುಟ್ಟು ಹೋಗಿದ್ದು ಬದಲಾಯಿಸಲು ಕೋರಿದರು.

ಕ್ರಮ:-ಕಾರ್ಯನಿರ್ವಾಹಕ ಇಂಜಿನಿಯರ್ ನಾಗಮಂಗಲರವರು ಮಾತನಾಡಿ ಪರಿವರ್ತಕದ ಕೊರತೆ ಇದ್ದು 3 ದಿನದೊಳಗೆ ಬದಲಾಯಿಸಲಾಗವುದು ಎಂದು ತಿಳಿಸಿದರು.

10) <u>ಬಿ.ಶ್ರೀನಿವಾಸಯ್ಯ ಜಿ ಬೊಮ್ಮೇನಹಳ್ಳಿ ಮೊಬೈಲ್ ನಂ:-9731963566</u>

ದೂರು:- ಐ.ಪಿ ಸೆಟ್‌ಗೆ ಸೋಲಾರ್ ಅಳವಡಿಸುವ ಸರ್ಕಾರದ ಯೋಜನೆಯ ಬಗ್ಗೆ ಮಾಹಿತಿ ಕೇಳಿದರು.

ಕ್ರಮ:-ಕಾರ್ಯನಿರ್ವಾಹಕ ಇಂಜಿನಿಯರ್ ನಾಗಮಂಗಲರವರು ಮಾತನಾಡಿ ಪೂರ್ಣ ಮಾಹಿತಿಯನ್ನು ನೀಡಿದರು.

11) ಎಸ್.ಎಸ್.ಯತಿರಾಜು.ಎಸ್ ಚೆನ್ನಾಪುರ ಮೊಬೈಲ್ ನಂ:-9483838899

ದೂರು:- ಬೋಗಾದಿಯ ಗ್ರಾಮದಲ್ಲಿ ಪೆಟ್ರೋಲ್ ಬಂಕ್ ಇದ್ದು ನಮ್ಮ ಬಂಕ್‌ನ ಮೇಲೆ ಲೈನು ಹಾದು ಹೋಗಿರುತ್ತದೆ ಬದಲಾಯಿಸಿ ಕೊಡಲು ಕೋರಿದರು.

ಕ್ರಮ:-ಸ್ವಯಂ ಆರ್ಥಿಕ ಕಾರ್ಯನಿರ್ವಹಣೆಯಡಿಯಲ್ಲಿ ಬದಲಾಯಿಸಿ ಕೊಳ್ಳಲು ಸೂಚಿಸಿದರು

ದೂರು:- ಮಂಚೇಗೌಡ ಮತ್ತು ನಂಜಪ್ಪ ರವರು ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಹಣ ಪಾವತಿಸಿದ್ದು ಪರಿವರ್ತಕ ಹಾಕಲು ಕೋರಿದರು.

ಕ್ರಮ:-ಕಾರ್ಯನಿರ್ವಾಹಕ ಇಂಜಿನಿಯರ್ ನಾಗಮಂಗಲರವರು ಮಾತನಾಡಿ ಬಿಂಡಿಗನವಿಲೆ ಶಾಖಾಧಿಕಾರಿಗಳಿಗೆ ಪರಿಶೀಲನೆ ಮಾಡುವಂತೆ ಸೂಚಿಸಲಾಯಿತು.

ದೂರು:- ಎಸ್ ಚೆನ್ನಾಪುರ ಗ್ರಾಮದಲ್ಲಿ ಕು.ನೀ.ಸರಬರಾಜುಗೆ ಲೈನು ಮತ್ತು ಕಂಬಗಳನ್ನು ಅಳವಡಿಸಿದ್ದು ಪರಿವರ್ತಕ ಹಾಕಲು ಕೋರಿದರು.

ಕ್ರಮ:-ಕಾರ್ಯನಿರ್ವಾಹಕ ಇಂಜಿನಿಯರ್ ನಾಗಮಂಗಲರವರು ಮಾತನಾಡಿ ಬಿಂಡಿಗನವಿಲೆ ಶಾಖಾಧಿಕಾರಿಗಳಿಗೆ ಪರಿಶೀಲಿಸಿ ಕ್ರಮ ಕೈಗೊಳ್ಳವಂತೆ ಸೂಚಿಸಲಾಯಿತು.

12) ಉಮೇಶ ಶ್ರೀರಾಮನಹಳ್ಳಿ ಮೊಬೈಲ್ ನಂ:-94 8531959

ದೂರು:- 63 ಕೆವಿಎ ಪರಿವರ್ತಕ ಸುಟ್ಟು ಹೋಗಿದ್ದು ಬದಲಾಯಿಸಲು ಕೋರಿದರು.

ಕ್ರಮ:-ಕಾರ್ಯನಿರ್ವಾಹಕ ಇಂಜಿನಿಯರ್ ನಾಗಮಂಗಲರವರು ಮಾತನಾಡಿ ಪರಿವರ್ತಕವನ್ನು ಅಳವಡಿಸಲು ಶಾಖಾದಿಕಾರಿಗಳಿಗೆ ಸೂಚಿಸಿದರು.

13) ನಾಗೇಶ ಮತ್ತು ವಿದ್ಯುತ್ ಗುತ್ತಿಗೆದಾರರು ಮೊಬೈಲ್ ನಂ:-9035206061

ದೂರು:- ಅಕ್ರಮ ಸಕ್ರಮ ಯೋಜನೆಯ ಕಾಮಗಾರಿಗಳು 1 ತಿಂಗಳನಿಂದ ನಿಂತು ಹೊಗಿದ್ದು ಕಾಮಗಾರಿಗಳನ್ನು ನಿರ್ವಹಿಸಲು ಕ್ರಮ ಕೈಗೊಳ್ಳಬೇಕೆಂದು ಕೋರಿದರು.

ಕ್ರಮ:-ಕಾರ್ಯನಿರ್ವಾಹಕ ಇಂಜಿನಿಯರ್ ನಾಗಮಂಗಲರವರು ಮಾತನಾಡಿ ಈಗಾಗಲೇ ಸದರಿ ಏಜೇನ್ಸಿ ರವರಿಗೆ ನೋಟಿಸ್ ನೀಡಿದ್ದು ಶೀಘ್ರವಾಗಿ ಕೆಲಸಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗವುದು ಎಂದು ತಿಳಿಸಿದರು.

ದೂರು:- ಎಂ.ಎಂ.ಎಸ್ ಸಾಫ್ಟವೇರ್‌ನ ಸಮಸ್ಸೆಗಳನ್ನು ಪರಿಹರಿಸಲು ಕೋರಿದರು.

ಕ್ರಮ:-ಲೇಕ್ಕಾಧಿಕಾರಿಗಳು ಮಾತನಾಡಿ ಈಗಾಗಲೇ ಸದರಿ ಏಜೇನ್ಸಿರವರಿಗೆ ಸಾಫ್ಟವೇರ್‌ನ ಸಮಸ್ಸೆಗಳನ್ನು ಪರಿಹರಿಸಲು ಸೂಚಿಸಲಾಗಿದೆ ಎಂದು ತಿಳಿಸಿದರು.

14) ರಾಮಣ್ಣ ಕಲ್ಲೇನಹಳ್ಳಿ ಮೊಬೈಲ್ ನಂ:-

ದೂರು:- 25 ಕೆವಿಎ ಪರಿವರ್ತಕ ಸುಟ್ಟು ಹೋಗಿದ್ದು ಬದಲಾಯಿಸಲು ಕೋರಿದರು.

ಕ್ರಮ:-ಕಾರ್ಯನಿರ್ವಾಹಕ ಇಂಜಿನಿಯರ್ ನಾಗಮಂಗಲರವರು ಮಾತನಾಡಿ 25ಕೆವಿಎ ಪರಿವರ್ತಕದ ಕೊರತೆ ಇದ್ದು 1 ವಾರದೊಳಗೆ ಬದಲಾಯಿಸಲಾಗವುದ ಎಂದು ತಿಳಿಸಿದರು.

15) ಶಿವಲಿಂಗೇಗೌಡ ಕಾಂತಪುರ ಮೊಬೈಲ್ ನಂ:-9 44884040

ದೂರು:- ನಮ್ಮ ಪಂಪ್ ಸೆಟ್‌ಗೆ ಲೋ ವೋಲ್ಟೇಜ್ ಇದ್ದು ಸರಿಯಾದ (440)ವೋಲ್ಟೇಜ್ ನೀಡಲು ಕೋರಿದರು.

ಕ್ರಮ:-ಕಾರ್ಯನಿರ್ವಾಹಕ ಇಂಜಿನಿಯರ್ ನಾಗಮಂಗಲರವರು ಮಾತನಾಡಿ ಶಾಖಾಧಿಕಾರಿಗಳಿಗೆ ಪರಿವರ್ತಕವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು

16) ಡಿ.ಕೆ.ಜಯರಾಮು ದೋಂದೇಮಾದಿಹಳ್ಳಿ ಮೊಬೈಲ್ ನಂ:-9449118601

ದೂರು:- ನಮ್ಮ ಗ್ರಾಮದಲ್ಲಿ ಸುಮಾರು 20 ಸಂಖ್ಯೆಯ ಕಬ್ಬಿಣದ ಕಂಬಗಳು ಇದ್ದು ಬದಲಾಯಿಸಲು ಕೋರಿದರು.

ಕ್ರಮ:-ಕಾರ್ಯನಿರ್ವಾಹಕ ಇಂಜಿನಿಯರ್ ನಾಗಮಂಗಲರವರು ಮಾತನಾಡಿ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ನಿಗಮದ ನಿಯಮದಂತೆ ಅಂದಾಜು ಪಟ್ಟಿಯನ್ನು ಸಲ್ಲಿಸಿ ಬದಲಾಯಿಸಲು ಸೂಚಿಸಿದರು

17) ಪುಟ್ಟಮಲ್ಲಯ್ಯ ಮೈಲಾರಪಟ್ಟಣ ಮೊಬೈಲ್ ನಂ -

ದೂರು:- ನಮ್ಮ ಗ್ರಾಮದಲ್ಲಿ 100ಕೆವಿಎ ಪರಿವರ್ತಕದಿಂದ ಸರಿಯಾಗಿ ವಿದ್ಯುತ್ ಪೂರೈಕೆ ಆಗುತ್ತಿಲ್ಲ ಎಂದು ಕೋರಿದರು.

ಕ್ರಮ:- ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸವಂತೆ ಸೂಚಿಸಿದರು.

ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

ಲೆಕ್ಕಾಧಿಕಾರಿ, ನಾಗಮಂಗಲ ವಿಭಾಗರವರು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿಗಳು/ನೌಕರರು ಹಾಗೂ ಗ್ರಾಹಕರುಗಳಿಗೆ ವಂದನಾರ್ಪಣೆ ಸಲ್ಲಿಸಿದ ನಂತರ ಸಭೆಯನ್ನು ಮಧ್ಯಾಹ್ನ 01:30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ದೂರನ್ನು ನೀಡಿದ ಗ್ರಾಹಕರ ಸಂಖ್ಯೆ-17

ಒಟ್ಟು ದೂರು/ಸಮಸ್ಯೆಗಳು- 22

ಮೆಮೊ ಸಂಖ್ಯೆ:ಕಾನಿಇಂ(ವಿ)/ಸಇಂ(ತಾ)/ನಾ/17-1 / 5844-52 ದಿನಾಂಕ: 26-3-18

26/3/18
ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ,
ನಾಗಮಂಗಲ.

ಪ್ರತಿಯನ್ನು ಇವರ ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ ಮಂಡ್ಯ.

ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.

1. ಲೆಕ್ಕಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ವಿಭಾಗ ನಾಗಮಂಗಲ.
2. ಲೆಕ್ಕಾಧಿಕಾರಿ, (ಆಂಪ) ಚಾ.ವಿ.ಸ.ನಿ.ನಿ., ಪಾಂಡವಪುರ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಉಪವಿಭಾಗ ನಾಗಮಂಗಲ.
4. ಶಾಖಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಶಾಖೆ ನಾಗಮಮಗಲ/ದೇವಲಾಪುರ/ಚೀಣ್ಯ.
5. ಕಿಆಸ/ಮು.ಕ